ಅಸಲು ದಾವಾ ನಂಃ 5/2023
ಡಿ ಡಬ್ಲ್ಯುಃ1

<u>ದಿನಾಂಕಃ **04-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್.ಎಸ್.ಕೆ. ವಕೀಲರಿಂದಃ</u>

ದಾವಾ ಸ್ವತ್ತು ಮೂಲತಃ ರಾಮೇಗೌಡ ಇವರಿಗೆ ಭೂ ಸುಧಾರಣೆ ಕಾಯಿದೆ ಅಡಿ ಮಂಜೂರಾದ ಆಸ್ತಿ ಇರುತ್ತದೆ ಎಂದರೆ ಸರಿ. ನಮ್ಮ ತಂದೆ ಅಣ್ಣಪ್ಪಗೌಡ ಇವರ ಹೆಸರಿನ ಜಮೀನಿನಲ್ಲಿ ಸರ್ವೆ ನಂಬರ್ 9 ರಲ್ಲಿ 3 ಎಕರೆ 11 ಗುಂಟೆ ಮಂಜೂರಾಗಿತ್ತು ಎಂದರೆ ಸರಿ. ಸರ್ವೆ ನಂಬರ್ 10 ರಲ್ಲಿ 1 ಎಕರೆ 30 ಗುಂಟೆ ರಾಮೇಗೌಡರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿ ಸರ್ವೆ ನಂಬರ್ 10 ರಲ್ಲಿ 4 ಎಕರೆ 11 ಗುಂಟೆ ರಾಮೇಗೌಡರಿಗೆ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ರಾಮೇಗೌಡರು, ವಾದಿ, ಸುಬ್ಬಮ್ಮ, ಚಂದ್ರಪ್ಪಗೌಡ, ಮರಿಯಪ್ಪಗೌಡ ಹಾಗೂ ಗಣೇಶ ಇವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ವಿಭಾಗದಲ್ಲಿ ರಾಮೇಗೌಡ, ಸುಬ್ಬಮ್ಮ ಮತ್ತು ವಾದಿ ಒಂದು ಪಕ್ಷಗಾರರಾಗಿ ಹಾಗೂ ಚಂದ್ರಪ್ಪಗೌಡ, ಮರಿಯಪ್ಪಗೌಡ ಮತ್ತು ಗಣೇಶ್ ಇನ್ನೊಂದು ಪಕ್ಷಗಾರರಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

ಭೂ ಸುಧಾರಣೆ ಕಾಯಿದೆ ಅಡಿ 1 ಎಕ್ರೆ 30 ಗುಂಟೆ ರಾಮೇಗೌಡರಿಗೆ ಮಂಜೂರಾಗಿದ್ದು ಸದರಿ ಆಸ್ತಿ ರಾಮೇಗೌಡ, ಸುಬ್ಬಮ್ಮ ಮತ್ತು ವಾದಿಗೆ ಒಂದು ಭಾಗ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ರಾಮೇಗೌಡರ ಮರಣಾ ನಂತರ ಅವರ ಹೆಂಡತಿ ಮತ್ತು ವಾದಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸುಬ್ಬಮ್ಮನವರು ತೀರಿಕೊಂಡ ನಂತರ ಸದರಿ ಆಸ್ತಿಯ ಖಾತೆ ವಾದಿಯ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಹೆಣ್ಣು ಮಕ್ಕಳ ಒಪ್ಪಿ ಗೆ ಪಡೆಯದೇ ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂಬರ್ 10 ರಲ್ಲಿ 1 ಎಕ್ರೆ 30 ಗುಂಟೆ ರಾಮೇಗೌಡರಿಗೆ ಮಂಜೂರಾದ ಆಸ್ತಿ ಇದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸಾಕ್ಷಿ ಅದು ಪಿರ್ತಾರ್ಜಿತ ಆಸ್ತಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಚಂದ್ರಪ್ಪಗೌಡ, ಮರಿಯಪ್ಪಗೌಡ ಮತ್ತು ಗಣೇಶ್ ಇವರಿಗೆ ಬಂದ ಆಸ್ತಿ ರಾಮೇಗೌಡರ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಃ 5/2023
ಡಿ ಡಬ್ಲ್ಯುಃ1

ವಾದಿಯ ತಂದೆ ತಾಯಿಗೆ 7 ಜನ ಮಕ್ಕಳು ಇರುವ ಬಗ್ಗೆ ನಾನು ಬಾಯಿ ಮಾತಿನ ಮೂಲಕ ಹೇಳಿದ್ದು ದಾಖಲೆ ಬೇಕು ಎಂದರೆ ತಂದು ಹಾಜರುಪಡಿಸುತ್ತೇನೆ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆಗೆ ಸರ್ವೆ ನಂಬರ್ 8 ರಲ್ಲಿ 3 ಎಕರೆ 19 ಗುಂಟೆ ಭೂ ಸುಧಾರಣೆ ಕಾಯಿದೆಯಡಿ ಮಂಜೂರಾಗಿರುತ್ತದೆ. ನಮ್ಮ ತಂದೆಯ ಮರಣಾ ನಂತರ ಸದರಿ ಆಸ್ತಿಯನ್ನು ನಾವು 4 ಜನ ಮಕ್ಕಳು ಹಿಸ್ಸಾ ಪತ್ರದ ಮೂಲಕ ಹಂಚಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಹಿಸ್ಸಾ ಪತ್ರದ ಮೂಖಾಂತರ ನನ್ನ ಪಾಲಿಗೆ 1 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ನಾವು ಯಾವ ವರ್ಷ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದು ನನಗೆ ನೆನಪಿರುವುದಿಲ್ಲ. ಸದರಿ ಹಿಸ್ಸೆಯ ಪ್ರಕಾರ ನಾನು 1 ಎಕರೆ ಜಮೀನಿನ ಹಕ್ಕುದಾರನಾಗಿ ಸ್ವಾಧೀನ ಹೊಂದಿರುತ್ತೇನೆ ಎಂದರೆ ಸರಿ.

ವಾದಿಯು ದಾವಾ ಆಸ್ತಿಯ ಹಕ್ಕುದಾರರು ಮತ್ತು ಸ್ವಾಧೀನ ಅನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನಾನು 25 ಗುಂಟೆ ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ವರದಿಯ ಪ್ರಕಾರ ನಾನು 25 ಗುಂಟೆ ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ವ್ಯಕ್ತಿಗಳಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ  ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ
Sd/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ